**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ಇಂಡಿ.**

**ಸಿಸಿ.ನಂ: 789/2017**

**ಪಿ.ಡಬ್ಲ್ಯೂ 4**

**ಸಿ.ಡಬ್ಲ್ಯೂ-8**

| | | |
|---|---|---|
| ಸಾಕ್ಷಿಯ ಹೆಸರು | : | ಆರತಿ ಖೈನೂರ |
| ತಂದೆ/ಗಂಡನ ಹೆಸರು | : | ಭೀಮರಾಯ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಅಬಕಾರಿ ನೀರಿಕ್ಷಕರು |
| ವಾಸಸ್ಥಳ | : | ಸಿಂದಗಿ ವಲಯ. |

**ದಿನಾಂಕ: 27-07-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು:**

**<u>ಮುಖ್ಯ ವಿಚಾರಣೆ: ಮಾನ್ಯ ಸ. ಸ.ಅ ರವರಿಂದ:</u>**

ನಾನು ದಿನಾಂಕ: 03.12.2012 ರಿಂದ 08.08.2016 ರವರೆಗೆ ಇಂಡಿಯ ಅಬಕಾರಿ ಉಪ ನೀರಿಕ್ಷಕರು ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ: 15.06.2016 ರಂದು ಚಾಸಾ 1 ರವರಿಂದ ಮುದ್ದೆಮಾಲುಗಳನ್ನು ಮತ್ತು ಕಡತಗಳನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ 1 ಲೀಟರ್ ಸಾಮರ್ಥ್ಯದ 2 ಪ್ಲಾಸ್ಟಿಕ ಬಾಟಲಿಗಳಲ್ಲಿ ಇದ್ದ ಮಾದರಿಯನ್ನು ಚಾಸಾ 5 ರವರ ಮೂಲಕ ರಾ.ಪಾ. ಕೇಂದ್ರ ಧಾರವಾಡಕ್ಕೆ ದಿನಾಂಕ: 24.06.2016 ರಂದು ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ರಾ.ಪಾ. ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ಪರಿಶೀಲಿಸಿಲಾಗಿ ಮು.ಮಾ. 1 ಮತ್ತು 2 ರಲ್ಲಿ ಇರುವ ಪದಾರ್ಥ ಮಾನವ ಸೇವನೆಗೆ ಯೋಗ್ಯವಾಗಿ ಇರುದವುದಿಲ್ಲ ಅಂತಾ ವರದಿ ಇದ್ದು, ಅದನ್ನು ಪರಿಶೀಲನೆ ಮಾಡಿ ರಾ.ಪಾ. ವರದಿಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ನಂತರ ಉಳಿದ ಮುದ್ದೆಮಾಲುಗಳ ಮುಟ್ಟುಗೋಲಿಗಾಗಿ ದಿನಾಂಕ: 12.07.2016 ರಂದು ಪ್ರಾದೇಶಿಕ ಆಯುಕ್ತರು ಅಬಕಾರಿ ಇಲಾಖೆ ವಿಜಯಪುರ ಅವರಿಗೆ ಮನವಿ ಬರೆದಿರುತ್ತೇನೆ. ನಂತರ ಅಆರೋಪಿತರ ವಿರುದ್ಧ ಸಾಕ್ಷ್ಯಾದಾರ ಕಂಡುಬಂದಿದ್ದರಿಂದ ದಿನಾಂಕ: 30.07.2016 ರಂದು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಈಗ ನಾನು ನೋಡುತ್ತಿರುವ ದಾಖಲೆ ರಾ.ಪಾ. ಕುರಿತು ನಾನು ಬರೆದ ಮನವಿ ಆಗಿದ್ದು ಅದನ್ನು ಈಗಾಗಲೇ ನಿ.ಪಿ. 1 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ ದಾಖಲೆ ರಾ.ಪಾ. ವರದಿಯನ್ನು ಆಗಿದ್ದು ಅದನ್ನು ಈಗಾಗಲೇ ನಿ.ಪಿ. 2 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ ದಾಖಲೆ ಪ್ರಾಧಿಕೃತ ಅಧಿಕಾರಿಗೆ ಬರೆದ ಮನವಿ ಆಗಿದ್ದು ಅದು ಜರಾಕ್ಸ ಪ್ರತಿ ಇದ್ದು, ಅದನ್ನು ಆರೋಪಿ ಪರ ವಕೀಲರಿಗೆ ತಕರಾರಿಗೆ ಒಳಪಟ್ಟು ಅದನ್ನು ನಿ.ಪಿ. 9 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ. 9(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ. 1 ಮತ್ತು 2 ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು: ಆರೋಪಿ ಪರ ಶ್ರೀ:ಎಸ್.ಆರ್.ಬಿ. ಅವರಿಂದ:</u>

ಮು.ಮಾ. 1 ಮತ್ತು 2 ರಲ್ಲಿ ಇರುವ ಪದಾರ್ಥ ಕಲಬೇರಿಕೆ ಶೆಂದೆ ಇದ್ದು, ಅದು ಬಣ್ಣ ರಹಿತವಾಗಿರುತ್ತದೆ. ರಾ.ಪಾ. ವರದಿಯನ್ನು ಮತ್ತು ನಾನು ಬರೆದ ಮನವಿಯಲ್ಲಿ ಮು.ಮಾ. 1 ಮತ್ತು 2 ರಲ್ಲಿರುವ ಪದಾರ್ಥ ಬಣ್ಣ ರಹಿತವಾಗಿರುತ್ತದೆ ಅಂತಾ ನಮೂದು ಇರುವುದಿಲ್ಲ. ಮುದ್ದೆಮಾಲುಗಳು ಎಲ್ಲಿಂದ ಬಂತು ಮತ್ತು ಯಾರು ಉತ್ಪಾದನೆ ಮಾಡಿದರು ಎನ್ನುವ ಕುರಿತು ತನಿಖೆ ಮಾಡಿರುವುದಿಲ್ಲ.

ದಿನಾಂಕಃ 15.06.2016 ರಂದು ಚಾಸಾ 1 ರವರಿಂದ ಮುದ್ದೆಮಾಲುಗಳನ್ನು ಮತ್ತು ಕಡತಗಳನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ 1 ಲೀಟರ್ ಸಾಮರ್ಥ್ಯದ 2 ಪ್ಲಾಸ್ಟಿಕ ಬಾಟಲಿಗಳಲ್ಲಿ ಇದ್ದ ಮಾದರಿಯನ್ನು ಚಾಸಾ 5 ರವರ ಮೂಲಕ ರಾ.ಪಾ. ಕೇಂದ್ರ ಧಾರವಾಡಕ್ಕೆ ದಿನಾಂಕಃ 24.06.2016 ರಂದು ಕಳುಹಿಸಿಕೊಟ್ಟಿರುತ್ತೇನೆ ಅಂತಾ ಸುಳ್ಳು ಹೇಳುತಿತದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ರಾ.ಪಾ. ವರದಿಯನ್ನು ಪಡೆದುಕೊಂಡಿರುತ್ತೇನೆ  ಅಂತಾ ಸುಳ್ಳು ಹೇಳುತಿತದ್ದೇನೆ ಎಂದರೆ ಸರಿಯಲ್ಲ. ಸದರಿ ವರದಿಯನ್ನು ಪರಿಶೀಲಿಸಿಲಾಗಿ ಮು.ಮಾ. 1 ಮತ್ತು 2 ರಲ್ಲಿ ಇರುವ ಪದಾರ್ಥ ಮಾನವ ಸೇವನೆಗೆ ಯೋಗ್ಯವಾಗಿ ಇರುದವುದಿಲ್ಲ ಅಂತಾ ವರದಿ ಇದ್ದು, ಅದನ್ನು ಪರಿಶೀಲನೆ ಮಾಡಿ ರಾ.ಪಾ. ವರದಿಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ  ಅಂತಾ ಸುಳ್ಳು ಹೇಳುತಿತದ್ದೇನೆ ಎಂದರೆ ಸರಿಯಲ್ಲ.

ನಂತರ ಉಳಿದ ಮುದ್ದೆಮಾಲುಗಳ ಮುಟ್ಟುಗೋಲಿಗಾಗಿ ದಿನಾಂಕಃ 12.07.2016 ರಂದು ಪ್ರಾದೇಶಿಕ ಆಯುಕ್ತರು ಅಬಕಾರಿ ಇಲಾಖೆ ವಿಜಯಪುರ ಅವರಿಗೆ ಮನವಿ ಬರೆದಿರುತ್ತೇನೆ ಅಂತಾ ಸುಳ್ಳು ಹೇಳುತಿತದ್ದೇನೆ ಎಂದರೆ ಸರಿಯಲ್ಲ. ನಂತರ ಅಆರೋಪಿತರ ವಿರುದ್ದ ಸಾಕ್ಷ್ಯಾದಾರ ಕಂಡುಬಂದಿದ್ದರಿಂದ ದಿನಾಂಕಃ 30.07.2016 ರಂದು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ  ಅಂತಾ ಸುಳ್ಳು ಹೇಳುತಿತದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಯಾವುದೇ ಸಾಕ್ಷ್ಯಾದಾರಗಳು ಕಂಡು ಬರದೆ ಇದ್ದರು ಸಹ ನಮ್ಮ ಕಛೇರಿಯ ಪ್ರಕರಣಗಳ ಸಂಖ್ಯೆಗಳನ್ನು ಹೆಚ್ಚಿಗೆ ತೋರಿಸುವುದಕ್ಕಾಗಿ ಖೋಟ್ಟಿ ದೂರನ್ನು ದಾಖಲಿಸಿದ ಮೇರೆಗೆ ಖೋಟ್ಟಿ ಅಂತಿಮ ವರದಿಯನ್ನು ತಯಾರಿಸಿಕೊಂಡು ಸಲ್ಲಿಸಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ.**

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.,**